# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 114 /2020-21 ದಿನಾಂಕ: 08.02.2021

**-:ದಿನಾಂಕ:06-02--2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:06.02.2021ರ ಶುಕ್ರವಾರ ಅಪರಾಹ್ನ 2.30 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀಮತಿ.ಮಮತಾ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) | ಹಾಜರಿದ್ದರು. |
| 5. | ಶ್ರೀ.ವಿನಯ್ | ಬಿಬಿಎಂಪಿ ಕಲ್ಯಾಣ ಇಲಾಖೆ | ಹಾಜರಿದ್ದರು. |
| 6. | ಶ್ರೀ.ಸಂಜಯ್ಯ.ಎಸ್ | AE Electrical | ಹಾಜರಿದ್ದರು. |
| 7. | ಶ್ರೀ.ವೆಂಕಟೇಶ್ | ಡಬ್ಲ್ಯೂ.ಐ. ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 8. | ಶ್ರೀ.ಶಶಿಕುಮಾರ್ | ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 9. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 10. | ಶ್ರೀ.ಮಂಜುನಾಥ | ಭೈರತಿ | ಹಾಜರಿದ್ದರು. |
| 11 | ಶ್ರೀ.ಮಂಜುನಾಥ ಎಚ್.ವಿ | ಅಧ್ಯಕ್ಷರು ಜಿಲ್ಲಾ ಎಸ್.ಸಿ ಮೋರ್ಚಾ | ಹಾಜರಿದ್ದರು. |
| 12 | ಶ್ರೀ.ಪ್ರಸಾದ್.ಎಂ | ವಾರ್ಡ್ ಅಧ್ಯಕ್ಷರು ಸಾದರಮಂಗಳ | ಹಾಜರಿದ್ದರು. |
| 13 | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 14 | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 15 | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 16 | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 17 | ಶ್ರೀ.ಮಹಂತೇಶ್ | ಪಶುಪಾಲನೆ | ಹಾಜರಿದ್ದರು. |
| 18 | ಶ್ರೀ.ಶಿವರಾಜ್.ಡಿ,ಬಿ | Street Light | ಹಾಜರಿದ್ದರು. |

| | | | |
|---|---|---|---|
| 19 | ಶ್ರೀ. ಎನ್.ಆರ್. ಮುನಿಯಪ್ಪ | AEE. R.I. Mahadevapura | ಹಾಜರಿದ್ದರು. |
| 20 | ಶ್ರೀ.ಕೆಂಪರಾಜು ಎ | ಬಿಳೇಶಿವಾಲೆ ಶಕ್ತಿ ಕೇಂದ್ರ ಪ್ರಧಾನ ಕಾರ್ಯದರ್ಶಿ | ಹಾಜರಿದ್ದರು. |
| 21 | ಶ್ರೀ.ಮಂಜುನಾಥ್ | ಆರ್.ಡಬ್ಲ್ಯೂ.ಎ. ಅಯ್ಯಪ್ಪನಗರ | ಹಾಜರಿದ್ದರು. |
| 22 | ಶ್ರೀ.ವೆಂಕಟೇಶ್ ಕೆ ಆರ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 23 | ಶ್ರೀ.ನವೀನ್ ಕುಮಾರ್. ಆರ್.ಬಿ | ಮಾರ್ಷಲ್ ಹೂಡಿ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**Animal Husbandry:-**

- ಮೊದಲಿಗೆ Animal Husbandry ಬಗ್ಗೆ ಮಾತನಾಡಲು ಅಧ್ಯಕ್ಷರು ಸೂಚಿಸಿದರು.
- ಪ್ರಸಾದ್ ಸಾಧರಮಂಗಲ ರವರು ಹಾಗೂ ಸತೀಶ್ ಅಯ್ಯಪ್ಪನಗರ ರವರು ಹಂದಿಗಳ ಕಾಟದ ಬಗ್ಗೆ ಅಯ್ಯಪ್ಪನಗರ ಹಾಗೂ ಬೆಳತ್ತೂರು ವ್ಯಾಪ್ತಿಯಲ್ಲಿ ಹಂದಿಗಳ ಕಾಟ ಜಾಸ್ತಿ ಇರುತ್ತದೆ ಇದನ್ನು ಬಗೆಹರಿಸಲು ಕೋರಿದರು.
- ಅಧ್ಯಕ್ಷರು ಸಂಬಧಿಸಿದವರಿಗೆ ಇದರ ಬಗ್ಗೆ ವಿವರ ನೀಡಲು ಸೂಚಿಸಿದರು.
- ಅದರಂತೆ Veterinary Supervisors ರವರು ಹಂದಿಗಳ ಮಾಲಿಕರಿಗೆ ಈಗಾಗಲೇ ನೋಟಿಸ್ ಕೊಟ್ಟಿದ್ದು ಹಾಗೂ ಹಲವು ಕಡೆ ಹಂದಿಗಳನ್ನು ಹಿಡಿದಿದ್ದು ಇನ್ನೂ ಇರುವ ಕಡೆ ಹಿಡಿಯಲಾಗುವುದು ಎಂದು ತಿಳಿಸಿದರು.
- ಅಧ್ಯಕ್ಷರು Veterinary Supervisors ರವರಿಗೆ ಸಲಹೆಯಾಗಿ ಎಲ್ಲಿ ಹಂದಿಗಳನ್ನು ಹಿಡಿಯುತ್ತಾರೊ ಅಲ್ಲಿ ಹಂದಿಗಳನ್ನು ಹಿಡಿದ ತಕ್ಷಣ ಮಹಜರ್ ಮಾಡಿಸಿ ಎಷ್ಟು ಹಂದಿಗಳನ್ನು ಹಿಡಿದಿರುತ್ತಾರೆ ಎಂದು ದೃಢೀಕರಿಸಿ ಮಹಜರ್ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.
- ADAH ಮಹಂತೇಶ್ ರವರು ಹಂದಿಗಳನ್ನು ಹಿಡಿಯಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಟೆಂಡರ್‌ನ ನಂತರ ಅವುಗಳನ್ನು ಹಿಡಿದು ಪ್ರಕ್ರಿಯೆಯಂತೆ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿರುತ್ತಾರೆ.
- ಪಾಟೀಲ್ ಅಯ್ಯಪ್ಪನಗರ ರವರು ಹಾಗೆ ನಾಯಿಗಳು ಬೃಂದಾನ ಬಡಾವಣೆ ಎಲ್ಲಾ ಕಡೆ ಜಾಸ್ತಿಯಿರುತ್ತವೆಂದು ತಿಳಿಸಿರುತ್ತಾರೆ.

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ತ್ಯಾಜ್ಯ ನಿರ್ವಹಣೆ ಬಗ್ಗೆ ಬೆಳತ್ತೂರು ಹಸಿರುದಳ ಕಡೆಯಿಂದ ಡ್ರೈವೆಸ್ಟ್ ನಿರ್ವಹಣೆಯನ್ನು ಎಲ್ಲಾ ಕಡೆಯಿಂದ ಸ್ವಚ್ಚವಾಗಿ ನಡೆಯುತ್ತದೆ ಎಂದು ತಿಳಿಸಿರುತ್ತಾರೆ.
- ತಿಗಳರ ಪಾಳ್ಯ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳಿಗೆ ಕಸ ಹಾಕುತ್ತಾರೆಂದು ತಿಳಿಸಿರುತ್ತಾರೆ. ಅಧ್ಯಕ್ಷರು ಈ ವಿಚಾರವಾಗಿ ಮಾರ್ಷಲ್ ಹಾಗೂ ಜೂನೀಯರ್ ಹೆಲ್ತ್ ಇನ್ಸ್‌ಪೆಕ್ಟರ್ ರವರು ಸ್ಥಳ ಪರಿಶೀಲಿಸಿ ಅಲ್ಲಿ ಕಸಹಾಕುವವರಿಗೆ ದಂಡ ಹಾಕಿ ಕಸ ಬಿಳದ ಹಾಗೆ ನೋಡಿಕೊಳ್ಳಲು ಸೂಚಿಸಿರುತ್ತಾರೆ.

- ಅಯ್ಯಪ್ಪನಗರ ಆರ್.ಡಬ್ಲ್ಯೂ.ಎಂ ಪಾಟೀಲ್ ಹಾಗೂ ಸಾರ್ವಜನಿಕರು ನಮ್ಮ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆಗೆ ಡ್ರೈವೆಸ್ಟ್ ತೆಗೆಯಲು ಸರಿಯಾಗಿ ಬರುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ.
- ಅಧ್ಯಕ್ಷರು ಎಇಇ ಮಮತ ರವರು ಈಗಿನ ಸದ್ಯದ ಸ್ಥಿತಿಯಲ್ಲಿ, ವಾರ್ಡ್‌ನಲ್ಲಿ ಡ್ರೈವೆಸ್ಟ್ ಸಂಗ್ರಹಣೆ ಮಾಡುಲು ಆಟೋಗಳಿರುತ್ತವೆ ಹಾಗೂ ವಾಹನಗಳು ಸಾಕಾಗುತ್ತಿರುವುದಿಲ್ಲ ಇನ್ನೂ ಹೆಚ್ಚಿನ ವಾಹನಗಳು ಬೇಕು ಎಂದು Head Office ಗೆ ಕಡೆತ ತಯಾರಿಸಿ ಕಳುಹಿಸಿರುತ್ತೇವೆಂದು ತಿಳಿಸಿರುತ್ತಾರೆ ಹಾಗೂ ಸದ್ಯದ ಸ್ಥತಿಯಲ್ಲಿ ವೆಟ್ಟ್ ಸಂಗ್ರಹಿಸುವ ವಾಹನಗಳಿಂದ ಡ್ರೈವೆಸ್ಟ್ ಸಂಗ್ರಹಿಸಲು ಸೂಚಿಸಿರುತ್ತೇವೆಂದು ತಿಳಿಸಿದರು.
- ವಾರ್ಡ್‌ನಲ್ಲಿ ಶುಕ್ರವಾರ ಬ್ಲಾಕ್ ಸ್ಪಾಟ್ ಸುಂಧರೀಕರಣ ಮಾಡಲು ಅಧ್ಯಕ್ಷರು ಸೂಚಿಸಿರುತ್ತಾರೆ.
- ವೆಂಕಟರಮಣಪ್ಪ ರವರು ಕಮರ್ಷಿಯಲ್ ವೆಸ್ಟ್‌ನ್ನು ಪರವಾನಗಿ ಇಲ್ಲದೆ ಇರುವವರು ವೆಸ್ಟ್ ಕಲೆಕ್ಷನ್ ಮಾಡುತ್ತಿರುತ್ತಾರೆಂದು ತಿಳಿಸಿರುತ್ತಾರೆ. ಅಧ್ಯಕ್ಷರು ಸಿನೀಯರ್ ಹೆಲ್ತ್ ಇನ್ಸ್‌ಪೆಕ್ಟರ್ ರವರಿಗೆ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಲು ಸೂಚಿಸಿದರು.

**ಕಾಮಗಾರಿ ಇಲಾಖೆ:-**

- ಪ್ರಸಾದ್ ಕೊಡಿಗೇಹಳ್ಳಿಯಲ್ಲಿ ರಸ್ತೆಬದಿಗಳಲ್ಲಿನ ಚರಂಡಿಗಳಲ್ಲಿನ ಹೂಳು ಎತ್ತುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಅಧ್ಯಕ್ಷರು ಎಇಇ ಮುನಿಯಪ್ಪ ರವರಿಗೆ ಆದಷ್ಟು ಬೇಗ ಮಣ್ಣು ತೆಗೆಯಲು ಸೂಚಿಸಿರುತ್ತಾರೆ.
- ಮಂಜುನಾಥ ಅಯ್ಯಪ್ಪನಗರ ರವರು ರಸ್ತೆ ಡಿವೈಡರ್‌ಗಳು ಸರಿಯಾಗಿ ಹಾಕಿರುವುದಿಲ್ಲ ಅದನ್ನು ಸರಿಪಡಿಸಲು ಕೊರಿದರು. ಎಇಇ ಮುನಿಯಪ್ಪ ರವರು ಸರಿಪಡಿಸುವುದಾಗಿ ತಿಳಿಸಿದರು ಹಾಗೂ ಬಿ.ಡಬ್ಲ್ಯೂ.ಎಸ್,ಎಸ್.ಬಿ ರವರು ಅಗೆದಿರುವ ಕೆಲಸಗಳನ್ನು ಸರಿಪಡಿಸಲು ಸೂಚಿಸಿದರು.
- ಮಂಜುನಾಥ ಹೂಡಿ ರವರು ಹೂಡಿ ಸರ್ಕಲ್ ನಿಂದ ಹೂಡಿ ಪ್ರೈ ಓವರ್ ವರೆಗೆ ರಸ್ತೆ ಅಗಲೀಕರಣದ ಕೆಲಸ ಶುರುವಾಗಿರುವುದಿಲ್ಲ ಎಂದು ಸಭೆಯಲ್ಲಿ ಚರ್ಚಿಸಲಾಯಿತ್ತು. ಎಇಇ ಮುನಿಯಪ್ಪ ಮೇಜರ್ ರೋಡ್ ಮುಂದಿನ ದಿನಗಳಲ್ಲಿ ಕೆಲಸ ಪ್ರಾರಂಭಿಸುವುದಾಗಿ ತಿಳಿಸಿದರು.
- ಕೆಂಪರಾಜು ಬಿಳೀಶಿವಾಲೆಯಲ್ಲಿ ಹಳೆ ಬಸ್ ನಿಲ್ದಾಣದ ಹತ್ತಿರ ಒಂದು ಕಡೆ ಚರಂಡಿ ಕಟ್ಟಿದ್ದಾರೆ ಇನ್ನೊಂದು ಕಡೆ ರಸ್ತೆಯ ಪಕ್ಕದ ಚರಂಡಿಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಬಿಳೀಶಿವಾಲೆ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗಗಳನ್ನು ಹಲವು ಜನರು ನಮ್ಮದು ಎಂದು ಕೆಲವರು ಒತ್ತುವರಿ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ತಿಳಿಸಿದರು. ಅಧ್ಯಕ್ಷರು ಈ ಸಮಸ್ಯೆಗೆ ಸಹಾಯಕ ಅಭಿಯಂತರರು Ward Engineer ಹಾಗೂ Majar Road Ward Engineer ಇಬ್ಬರು ಬುಧುವಾರ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಆರೋಗ್ಯಸ್ವಾಮಿ ರವರು ಭೈರತಿ ಗೆದ್ದಲಹಳ್ಳಿ ರಸ್ತೆಯಲ್ಲಿ ಹಳೆಮೋರಿಗಳನ್ನು ಒಡೆದು ಹೊಸ ಮೋರಿಗಳನ್ನು ಮಾಡುತ್ತಿರುವುದು ಸರಿಯಿಲ್ಲ ಎಂದು ತಿಳಿಸಿರುತ್ತಾರೆ. ಅದರಂತೆ ಎಇಇ ಮುನಿಯಪ್ಪ ನವರು ರಸ್ತೆಗೆ ಸರಿಹೊಂದುವಂತೆ ಹೊಸದಾಗಿ ನಿರ್ಮಿಸಲು ಒಡೆಯುತ್ತಿರುತ್ತೇವೆಂದು ತಿಳಿಸಿದರು.
- ವಾರ್ಡ್ ಕಾಮಗಾರಿ ಸಂಬಂಧಿಸಿದ್ದಂತೆ ಈಗಾಗಲೇ ಟೆಂಡರ್ ಕರೆಯಲಾಗಿರುವ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ತಿಳಿಸಿದರು.

**ವಿದ್ಯುತ್:-**

- ಪ್ರಸಾದ್ ಕೊಡಿಗೇಹಳ್ಳಿ PNC ಶಾಲೆ ರಸ್ತೆಯಲ್ಲಿನ LT ಲೈನ್‌ನ್ನು ಹಾಗೂ ಹೊಸ ಕೇಬಲ್ ಅಳವಡಿಸಲು ಕೋರಿರುತ್ತಾರೆ. ಅದರಂತೆ AE Electrical BBMP ರವರು ಸೋಮುವಾರ ಹೊಸ ಕೇಬಲ್ ಅಳವಡಿಸುವುದಾಗಿ ತಿಳಿಸಿದರು.
- ಕೆಂಪರಾಜ್ ಬಿಳೇಶಿವಾಲೆಯಿಂದ ಹೊಸಬೀದಿದೀಪಗಳು ಬೇಕೆಂದು ಕೋರಿರುತ್ತಾರೆ.
- ಬೃಂದಾವನ್ ಲೇಔಟ್, ಸಿರಿಡಿ ಲೇಔಟ್ ಹಾಗೂ ತಿಗಳರಪಾಳ್ಯ ಈ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರವುದಿಲ್ಲ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಅಧ್ಯಕ್ಷರು AE Electrical BBMP ರವರು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
- ಪ್ರಸಾದ್‌ರವರು ಸಾದರಮಂಗಲ ಹಾಗೂ ಬಿಳೇಶಿವಾಲೆಯಲ್ಲಿ High Mask Light ರಿಪೇರಿಯಾಗಿದ್ದು ಸರಿಪಡಿಸಲು ಕೋರಿರುತ್ತಾರೆ.

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಮಂಜುನಾಥ ಅಯ್ಯಪ್ಪನಗರ ರವರು ನೀರನ ಸಮಸ್ಯೆ ಬಗ್ಗೆ ಕೋರಿದರು.
- ಸತೀಶ್ ಅಯ್ಯಪ್ಪನಗರ UGD ಚೇಂಬರ್‌ಗಳಲ್ಲಿನ ಮಣ್ಣು ತೆಗೆಯುತ್ತಿರುವುದಿಲ್ಲ ಹಾಗೂ Jeetting ವಾಹನ ತುಂಬಾ ಹಳೆಯದಾಗಿರುತ್ತದೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ ಆದ್ದರಿಂದ ಹೂಡಿ ವಾರ್ಡ್‌ಗೆ ಹಳೆವಾಹನದ ಬದಲಿಗೆ ಹೊಸ ವಾಹನವನ್ನು ನೀಡಬೇಕು ಎಂದು ಕೇಳಿದರು.
- ಸಭೆಯಲ್ಲಿ ಹಾಜರಿದ್ದ WI ಬಿ.ಡಬ್ಲ್ಯೂ.ಎಸ್,ಎಸ್.ಬಿ, ರವರು ಮೇಲಾಧಿಕಾರಿಗಳ ಗಮನಕ್ಕೆ ತರುರತ್ತೇನೆಂದು ತಿಳಿಸಿರುತ್ತಾರೆ ಹಾಗೂ ಛೇಂಬರ್‌ಗಳಲ್ಲಿನ ಮಣ್ಣು ತೆಗೆಯಲು ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.
- ಆರ್.ಡಬ್ಲ್ಯೂ.ಎ ಅಂಬರೀಶ್ ಕೊಡಿಗೇಹಳ್ಳಿ ಸೌಮ್ಯ ಸಂಕಲ್ಪ ರಸ್ತೆ ಪಕ್ಕದಲ್ಲಿ UGD ಹಾಗೂ ಚರಂಡಿಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಬೋರ್‌ವೆಲ್‌ಗೆ ಸಂಬಂಧಿಸಿದಂತೆ ಮಂಜುನಾಥ ಹೂಡಿ ರವರು ಕಳೆದ ಸಭೆಯಲ್ಲಿ ಅತಿ ಹೆಚ್ಚು ದೂರುಗಳು ಬಂದಿರುತ್ತವೆಂದು ತಿಳಿಸಿರುತ್ತಾರೆ.
- ಅದರಂತೆ ಶಶಿ ಬೋರ್‌ವೆಲ್ ಮೆಂಟೇನ್ಸ್ ಕಂಟ್ರಾಕ್ಟರ್ ರವರು ಹಾಜರಿದ್ದು ಅವರು ಸರಿಪಡಿಸಿರುತ್ತೇನೆಂದು ಉತ್ತರಿಸಿದರು. ಅದಕ್ಕೆ ಮಂಜುನಾಥ ಹೂಡಿ ರವರು ಇವರು ಸರಿಯಾಗಿ ಕೆಲಸ ನಿರ್ವಹಿಸುವುದಿಲ್ಲ ಇವರನ್ನು ಬದಲಿಸಿ ಎಂದು ಎಇ ರವರಿಗೆ ತಿಳಿಸಿರುತ್ತಾರೆ.
- ಬೋರ್‌ವೆಲ್‌ಗಳ ದುರಸ್ಥಿ ಸರಿಯಾಗಿ ಮಾಡುತ್ತಿರುವುದಿಲ್ಲ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಅಧ್ಯಕ್ಷರು ಸಭಾ ನಿರ್ಣಯದಲ್ಲಿ ಶಶಿ ಬೋರ್‌ವೆಲ್ ಗುತ್ತಿಗೆದಾರರಿಗೆ ನೋಟಿಸ್ ನೀಡಿ ಬದಲಿಸಲು ಎಇ ರವರಿಗೆ ಸೂಚಿಸಿರುತ್ತಾರೆ. ಹಾಗೂ ಅಲ್ಲಿಯವರಿಗೆ ಸಾರ್ವಜನಿಕರಿಂದ ಬಂದ ದೂರುಗಳಿಗೆ ತಕ್ಷಣ ಬೋರ್‌ವೆಲ್‌ಗಳ ಸರಿಪಡಿಸಬೇಕು ಎಂದು ಸೂಚಿಸಿರುತ್ತಾರೆ.
- ತಿಗಳಪಾಳ್ಯ ಬೋರ್‌ವೆಲ್‌ನಲ್ಲಿ ಕಡಿಮೆ ನೀರು ಬರುತ್ತಿದ್ದು ಹತ್ತು ಪೈಪ್‌ಗಳನ್ನು ಇಳಸಬೇಕಾಗಿರುತ್ತದೆ ಎಂದು ಕೋರಿರುತ್ತಾರೆ.

- ಕೆಂಪರಾಜ್ ಬೀಳೆಶಿವಾಲೆ ರವರು ನಮ್ಮ ಬೀಳೆಶಿವಾಲೆ ವ್ಯಾಪ್ತಿಯಲ್ಲಿ ಒಟ್ಟು 7 ಬೋರ್‌ವೆಲ್‌ಗಳಿದ್ದು ಅವುಗಳಲ್ಲಿ ಕೆಲವು Stator ಗಳು ಹಾಳಾಗಿರುತ್ತವೆ ಅವುಗಳನ್ನು ಸರಿಪಡಿಸಲು ಕೋರಿರುತ್ತಾರೆ.
- ಅಧ್ಯಕ್ಷರು ಇದಕ್ಕೆ ಶಶಿ ರವರಿಗೆ ತಕ್ಷಣ ಈ ಎಲ್ಲಾ ಬೋರ್‌ವೆಲ್‌ಗಳ ಜಾಗಗಳನ್ನು ಪರಿಶೀಲಿಸಿ ಹಾಳಾಗಿರುವ ಎಲ್ಲಾ Stator ಹಾಗೂ ತೊಂದರೆಗಳಿದ್ದಲ್ಲಿ ತಕ್ಷಣ ಸರಿಪಡಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ನೀರಿನ ತೊಂದರೆ ಯಾರಿಗೂ ಆಗದಂತೆ ನೋಡಿಕೊಳ್ಳಬೇಕೆಂದು ಅಧ್ಯಕ್ಷರು ಶಶಿ ರವರಿಗೆ ಎಚ್ಚರಿಕೆ ನೀಡಿದರು.
- ಚಿಕ್ಕಭೈರತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ವತಿಯಿಂದ ಯುಜಿಡಿ ಹಾಗೂ ಕಾವೇರಿ ಕುಡಿಯುವ ನೀರಿನ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಸಮಯದಲ್ಲಿ ಈಗಾಗಲೇ ಇರುವ ಕುಡಿಯುವ ನೀರಿನ ಪೈಪ್‌ಗಳು ಡ್ಯಾಮೇಜ್ ಆಗಿರುತ್ತದೆ ಎಂದು ಆರ್.ಡಬ್ಲ್ಯೂ.ಎ. ಆರೋಗ್ಯಸ್ವಾಮಿ ರವರು ತಿಳಿಸಿರುತ್ತಾರೆ.
- ಅಧ್ಯಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ಇಂಜಿನೀಯರ್‌ಗಳಿಗೆ ಡ್ಯಾಮೇಜ್ ಆಗಿರುವ ಪೈಪ್‌ಗಳನ್ನು ಕೊಡಲೇ ಸರಿಪಡಿಸಲು ಸೂಚಿಸಿರುತ್ತಾರೆ.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ–54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ